ಅವನು ಒಂದು ಕುದುರೆಯನ್ನೇ ಒಳಗೆ ಎಳೆದುಕೊಂಡು ತಂದಿದ್ದನು. ಅವನು ಕುದುರೆಯ ಬಾಯಿ ಬಿಡಿಸಿ, "ಈ ಕುದುರೆಯ ಹಲ್ಲುಗಳನ್ನು ಒಂದೊಂದಾಗಿ ಎಣಿಸಿದಾಗ, ನಿಮಗೆ ಪ್ರತ್ಯಕ್ಷ ಪ್ರಮಾಣದ ಮೂಲಕ ಕುದುರೆಗಳಿಗೆ ಹಲ್ಲುಗಳು ಎಷ್ಟು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ" ಎಂದು ಹೇಳಿ ವಿಜ್ಞಾನಿಗಳನ್ನು ದಂಗುಪಡಿಸಿದನು. ಸತ್ಯಾನ್ವೇಷಣೆಯ ಹಲವು ದಾರಿಗಳಲ್ಲಿ ಪ್ರತ್ಯಕ್ಷಪ್ರಮಾಣದ ಪ್ರಯೋಗಮಾರ್ಗವೂ ಒಂದು.

ಅಂದು ಪೀಸಾ ಗೋಪುರದ ಸುತ್ತಮುತ್ತ ಜನಸಾಗರವೇ ನೆರೆದಿತ್ತು. ವಾಲುತ್ತಿರುವ ಗೋಪುರವನ್ನು ನೋಡಲು ಜನ ನೆರೆದಿರಲಿಲ್ಲ. ಜನರ ದೃಷ್ಟಿಯೆಲ್ಲಾ ವಾಲುಗೋಪುರದ ತುದಿಯಲ್ಲಿ ನಿಂತಿದ್ದ ಗೆಲಿಲಿಯೋನ ಮೇಲೆ ನೆಟ್ಟಿದ್ದುವು. ಗೆಲಿಲಿಯೊ ಕಬ್ಬಿಣದ ಎರಡು ಫಿರಂಗಿ ಗುಂಡುಗಳನ್ನು (ಒಂದು ಗುಂಡು ಇನ್ನೊಂದಕ್ಕಿಂತ ಹತ್ತು ಪಾಲು ಹೆಚ್ಚು ತೂಗುತ್ತಿತ್ತು) ಏಕಕಾಲದಲ್ಲಿ ಗೋಪುರದ ತುದಿಯಿಂದ ಕೆಳಗೆ ಬೀಳಿಸಿದ. ಅವೆರಡೂ ಏಕಕಾಲದಲ್ಲಿ ಭೂಮಿಗೆ ಬಿದ್ದುವು. ನೆರೆದಿದ್ದ ಜನರು ಚಪ್ಪಾಳೆ ತಟ್ಟಿ ಗೆಲಿಲಿಯೋನ ಪ್ರಯೋಗ ಸಫಲವಾದುದಕ್ಕೆ ಮೆಚ್ಚುಗೆ ಸೂಚಿಸಿದರು. ಭಿನ್ನ ತೂಕದ ಎರಡು ವಸ್ತುಗಳನ್ನು ಏಕಕಾಲದಲ್ಲಿ ಮೇಲಿನಿಂದ ಕೆಳಗೆ ಬೀಳಿಸಿದರೆ ಭಾರವಾದ ವಸ್ತು ಹೆಚ್ಚು ವೇಗವನ್ನು ಪಡೆದು ಇನ್ನೊಂದಕ್ಕಿಂತ ಮುಂಚಿತವಾಗಿ ನೆಲವನ್ನು ತಲಪುವುದೆಂದು ಸುಮಾರು ೧೮೦೦ ವರ್ಷಗಳಷ್ಟು ಹಿಂದೆ ಅರಿಸ್ಟಾಟಲ್ ಬರೆದಿದ್ದ. ಅದನ್ನು ಪ್ರಶ್ನಿಸಲು ಅಥವಾ ಅದರ ಕುರಿತು ಚಿಂತಿಸಲು ಹೋಗದೆ, ಎಲ್ಲರೂ ಅರಿಸ್ಟಾಟಲ್ ಹೇಳಿದ್ದು ಸತ್ಯವೆಂದೇ ನಂಬಿದ್ದರು. ಆದರೆ ತತ್ತ್ವವೊಂದನ್ನು ಯಾರೇ ಹೇಳಿರಲಿ, ಅದನ್ನು ಪ್ರಶ್ನಿಸದೆ, ಅದರ ಕುರಿತು ಚಿಂತನೆ ನಡೆಸದೆ, ಪ್ರಯೋಗ ನಡೆಸದೆ ಗೆಲಿಲಿಯೊ ಸ್ವೀಕರಿಸುತ್ತಿರಲಿಲ್ಲ. ಆ ದಿನ ಮಾಡಿದ ಪ್ರಯೋಗದ ಮೂಲಕ ಅವನು, ಅರಿಸ್ಟಾಟಲ್ ಹೇಳಿದ್ದ ತತ್ತ್ವವು ಸತ್ಯಕ್ಕೆ ದೂರವಾದುದು ಮತ್ತು ಗಾಳಿಯು ಒಡ್ಡುವ ಅಡಚಣೆಗೆ ಒಳಗಾಗದಷ್ಟು ಭಾರವಾದ ವಿಭಿನ್ನ ತೂಕದ ಎರಡು ಕಾಯಗಳನ್ನು ಮೇಲಿಂದ ಏಕಕಾಲದಲ್ಲಿ ಬೀಳಿಸಿದಾಗ, ಅವು ಏಕಕಾಲದಲ್ಲಿ ಭೂಸ್ಪರ್ಶ ಮಾಡುತ್ತವೆಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟ.

**ಸೂಕ್ಷ್ಮ ಅವಲೋಕನ ಮತ್ತು ಪ್ರಯೋಗನಿಷ್ಠೆಗಳು** ಗೆಲಿಲಿಯೋಗೆ ಬಾಲ್ಯದಿಂದಲೂ ಇದ್ದವು. ಅವನಿನ್ನೂ ಹದಿನೇಳು ವರ್ಷದ ವೈದ್ಯ ವಿದ್ಯಾರ್ಥಿಯಾಗಿದ್ದಾಗ ಪೀಸಾದ ಚರ್ಚಿನಲ್ಲಿ ಛಾವಣಿಯಿಂದ ತೂಗುಬಿಟ್ಟಿದ್ದ ತೂಗುದೀಪವೊಂದು, ತೂಗಾಟದ ವಿಸ್ತಾರ ಎಷ್ಟೇ ಇದ್ದಾಗಲೂ, ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಲು ಸ್ಥಿರವಾದ ಕಾಲಾವಧಿಯನ್ನು ತೆಗೆದುಕೊಳ್ಳುವುದನ್ನು ಗಮನಿಸಿದ. ಗಡಿಯಾರಗಳೇ ಇಲ್ಲದ ಆ ಕಾಲದಲ್ಲಿ ಅವನು ತನ್ನ ನಾಡಿಯ ಬಡಿತವನ್ನೇ ಮಾನದಂಡವಾಗಿ ಬಳಸಿ, ತೂಗಾಡುವ ಲೋಲಕವೊಂದನ್ನು ತಯಾರಿಸಿಕೊಂಡು, ಆಂದೋಲನಕಾಲವು ಹೇಗೆ ಲೋಲಕದ ಉದ್ದವನ್ನು ಅವಲಂಬಿಸಿದೆ ಎಂಬುದನ್ನು ಕಂಡುಕೊಂಡನು. ಗೆಲಿಲಿಯೊ ಗತಿವಿಜ್ಞಾನದ ಪಿತಾಮಹನೂ ಆಗಿದ್ದ. ಅವನು ಇಳಿಜಾರು ಹಲಗೆಗಳನ್ನು ಬಳಸಿಕೊಂಡು, ಭೂಮಿಯ ಗುರುತ್ವಾಕರ್ಷಣ ಶಕ್ತಿಗೆ ಒಳಗಾಗುವ ಕಾಯವೊಂದರ ವೇಗ, ಅದು ಚಲಿಸುವ ದೂರಗಳ ಕುರಿತು ಪ್ರಯೋಗ ನಡೆಸಿದ. ಅಲ್ಲದೆ ಬಲ ಮತ್ತು ಕಾಯಗಳ ವರ್ತನೆಗಳ ಕುರಿತೂ ಅಧ್ಯಯನ ನಡೆಸಿದ.


ಗೆಲಿಲಿಯೋ

ಹಾಲೆಂಡಿನ ಲಿಪ್ಪರ್ ಷೇ ಎಂಬುವವನು ದೂರದಲ್ಲಿರುವ ವಸ್ತುಗಳು ಹತ್ತಿರದಲ್ಲಿರುವಂತೆ ತೋರಿಸುವ ದೂರದರ್ಶಕವನ್ನು ಆವಿಷ್ಕರಿಸಿದ್ದಾನೆ ಎಂದು ಕೇಳಿದ ಸುದ್ದಿಯಿಂದ ಸ್ಫೂರ್ತಿ ಪಡೆದ ಗೆಲಿಲಿಯೊ ತಾನೇ ಅಂತಹ ಒಂದು ಉಪಕರಣವನ್ನು ತಯಾರಿಸಿಕೊಂಡ. ಅದನ್ನು ಹಂತಹಂತವಾಗಿ ಪರಿಷ್ಕರಿಸಿ ನಕ್ಷತ್ರ ವೀಕ್ಷಣೆ ಮಾಡತೊಡಗಿದ. ೨೦೦೯ ರ ವರ್ಷವು ಈ ಸಾಧನೆಯ ೪೦೦ ನೇ ವಾರ್ಷಿಕೋತ್ಸವದ ಅಪೂರ್ವ ಸಂದರ್ಭವಾಗಿತ್ತು.

ಸೂರ್ಯನಲ್ಲಿ ಕಪ್ಪು ಕಲೆಗಳಿರುವುದು, ಸೂರ್ಯ ತನ್ನ ಅಕ್ಷದಲ್ಲಿ ಸುತ್ತುವುದು, ಚಂದ್ರನಲ್ಲಿ ಗಿರಿಕಂದರಗಳಿರುವುದು, ಗುರುಗ್ರಹಕ್ಕೆ ಉಪಗ್ರಹಗಳಿರುವುದು, ಚಂದ್ರನಂತೆ ಶುಕ್ರಗ್ರಹ ಕೂಡ ವೃದ್ಧಿಕ್ಷಯಗಳಿಗೆ ಒಳಗಾಗುವುದು, ಕ್ಷೀರಪಥದಲ್ಲಿ (ಆಕಾಶಗಂಗೆ) ಲಕ್ಷಾಂತರ ನಕ್ಷತ್ರಗಳ ಇರುವಿಕೆ ಮುಂತಾದ ವಿಷಯಗಳನ್ನು ಗೆಲಿಲಿಯೋ ಪ್ರಕಟಿಸಿ ಜನರಲ್ಲಿ ಅಚ್ಚರಿ ಮೂಡಿಸಿದ. ಬೈಬಲ್ ಹೇಳುವ ಭೂಕೇಂದ್ರಿತ ಸಿದ್ಧಾಂತ ನಿಜವಲ್ಲ, ಕೋಪರ್ನಿಕಸ್ ಹೇಳಿದ ಸೂರ್ಯಕೇಂದ್ರಿತ ಸಿದ್ಧಾಂತವೇ ಸತ್ಯ ಎಂದು ಹೇಳಿದ ಗೆಲಿಲಿಯೋ ಚರ್ಚಿನ ಕೆಂಗಣ್ಣಿಗೆ ತುತ್ತಾಗಿ, ತಪ್ಪೊಪ್ಪಿಗೆ ಮತ್ತು ಗೃಹಬಂಧನದ ಶಿಕ್ಷೆಗೆ ಒಳಗಾಗಿ ಬಹಳ ಕಷ್ಟ ಅನುಭವಿಸಿದ.

*(ಮುಂದುವರಿಯುವುದು)*




**ವಿಜ್ಞಾನವು ಕೇವಲ ವಾಸ್ತವಿಕತೆಯನ್ನು ಮಾತ್ರ ಪರಿಭಾವಿಸಿದರೆ ಸಾಲದು, ದಾರ್ಶನಿಕತೆಯತ್ತ ಸಾಗಬೇಕು. ಕೇವಲ ತರ್ಕಕ್ಕೆ ಕಟ್ಟುಬಿದ್ದಿದ್ದ ವಿಜ್ಞಾನ ಈಗ ತರ್ಕಾತೀತ ಸತ್ಯವನ್ನು ಒಪ್ಪಿಕೊಳ್ಳುವ ಕಾಲವು ಸನ್ನಿಹಿತವಾಗಿದೆ. ಈ ಸಂದರ್ಭದಲ್ಲಿ ವ್ಯಷ್ಟಿ ಸಮಷ್ಟಿಗಳಲ್ಲಿ ಓತಪ್ರೋತವಾದ ಏಕಮೇವ ಚೈತನ್ಯವನ್ನು ಪರಿಭಾವಿಸುವ ವೇದಾಂತವು ಪ್ರಸ್ತುತವಾಗುತ್ತಲಿದೆ. ಈ ಅಂಶವನ್ನು ಮನಮುಟ್ಟುವಂತೆ, ರೂಪಕಗಳ ಮೂಲಕ ಚಿತ್ರಿಸಿರುವ ಲೇಖಕರು ನಿವೃತ್ತ ಕಾಲೇಜು ಪ್ರಾಧ್ಯಾಪಕರು. ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠವನ್ನು ಅಲಂಕರಿಸಿದ್ದ ಇವರು ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ ಮತ್ತು ಅನುವಾದಿಸಿದ್ದಾರೆ.**

## ತಾತ್ತ್ವಿಕತೆ ಎಂದರೇನು?

ವೇದಾಂತದೃಷ್ಟಿ ಇಲ್ಲದಿದ್ದರೆ ಯಾವುದೇ ವಸ್ತುವಿನ ಅಥವಾ ವಿಷಯದ ಬಗ್ಗೆ ಭೌತಿಕಾತೀತ ನಿಲುವು ತಳೆಯುವುದು ಬಹುಶಃ ಅಸಾಧ್ಯ. ಸ್ವಲ್ಪ ಆಳವಾಗಿ ಯೋಚನೆ ಮಾಡುವುದಾದರೆ, ಈ ಭೌತಿಕತೆ ಅಥವಾ ಭೌತವಿಜ್ಞಾನ – ಏಕೆ, ಇಡಿಯ ವಿಜ್ಞಾನ ಎನ್ನುವುದು ಏನು? ಗ್ರಹಿಸಲ್ಪಟ್ಟ ಭೌತಿಕ ಅಂಶಗಳ ವಿವರಣೆ, ಹೆಚ್ಚೆಂದರೆ ತೀರ ಅಲ್ಪವಾದ ಚಿಂತನೆಯನ್ನೊಡಗೂಡಿದ ಒಂದು ರೀತಿಯ 'ವಾಸ್ತವಿಕ' ಪರಿಪೂರ್ಣತೆ; 'ಇಪ್ಪತ್ತರ ತನಕದ ಮಗ್ಗಿ' ಬರೆದುಕೊಂಡು ಶಾಲೆಗೆ ಹೋಗುವ ಬಾಲಕನ ಧನ್ಯತೆ, ಅಷ್ಟೆ. ವಿಜ್ಞಾನದಲ್ಲಾಗಲಿ ಕಲೆಯಲ್ಲಾಗಲಿ ದಾರ್ಶನಿಕತೆಯನ್ನು, ಮುಕ್ತ ಚಿಂತನೆಯನ್ನು ಕಳೆದುಕೊಳ್ಳುವುದೆಂದರೆ ಆಂತರ್ಯದ ಜೀವಾಳವನ್ನೇ ಹೊರತುಪಡಿಸಿದಂತೆ. ಸಮಸ್ಯೆ ಇರುವುದೇ ಇಲ್ಲಿ. ದಾರ್ಶನಿಕತೆಯನ್ನೂ ಕಳೆದುಕೊಳ್ಳದಂತೆ, ತಾತ್ತ್ವಿಕತೆಯ ಅನಗತ್ಯ ಮೂಗುತೂರಿಕೆಯೂ ಇಲ್ಲದಂತೆ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಾವು ಕಂಡುಕೊಂಡ ವಾಸ್ತವಾಂಶಗಳನ್ನು ಅಭಿವ್ಯಕ್ತಿಸುವುದು; ಮಂಜು ಮುಸುಕಿದ ಹಾದಿಯಲ್ಲಿ ಮುನ್ನಡೆಯುವಾಗ, ಕಾಣದ ಕೈಯ ನೆರವು ಪಡೆದರೂ ಸಹ ಹಾದಿತಪ್ಪಿ ಕೊರಕಲಿಗೆ ಕಾಲಿಟ್ಟು ಪಾತಾಳಕ್ಕೆ ಬೀಳದಂತೆ ಎಚ್ಚರಿಕೆಯಿಂದಿರುವುದು.

ಕಳೆದ ಒಂದೂವರೆ ಶತಮಾನದಲ್ಲಿ ಪಾಶ್ಚಾತ್ಯ ಪ್ರಪಂಚ ಏಕಮುಖವಾಗಿ ಮುನ್ನುಗ್ಗಿದ ದಿಶೆ ಎಂದರೆ ದೇಶ–ಕಾಲಗಳ ಪ್ರಾಕೃತಿಕ ಘಟನೆಗಳ (ವಿಜ್ಞಾನ) ಹಾಗೂ ಅವು ಹಾಗೆ ನಡೆಯುವ ಕಾರ್ಯಕಾರಿ ವಿಧಾನಗಳ (ತಂತ್ರಜ್ಞಾನ) ಬಗ್ಗೆ ಅರಿವನ್ನು ಅರಸಿದುದು. ಇದರಿಂದ ಪ್ರಕೃತಿಯ ಮೇಲೆ ಮಾನವನ ಇಚ್ಛಾಪ್ರಭಾವ ವಿಸ್ತೃತವಾಯಿತು. ಇದು ವೈಜ್ಞಾನಿಕ ಕಲ್ಪನೆಯ ವಿಕಾಸದ ಕಾಲವಾದರೂ, ಕಲೆಯ ಅವನತಿಯ ಕಾಲವೂ ಹೌದು. ವಸ್ತು ತಂತ್ರಜ್ಞಾನದ ಎದುರು ಪುರುಷ ತಂತ್ರಜ್ಞಾನ (ನಿರಪೇಕ್ಷ ಚಿಂತನೆ, ಸಂಸ್ಕೃತಿ, ನೈತಿಕತೆ ಇತ್ಯಾದಿ) ಹಿಮ್ಮೆಟ್ಟಿದ ಕಾಲ ಇದು.

ತಾತ್ತ್ವಿಕತೆಯ ಮೂಲವಿರುವುದೇ ಪ್ರತಿಕ್ಷಣವನ್ನೂ ನವ ನವೋನ್ಮೇಷಶಾಲಿಯನ್ನಾಗಿಸುವ ಅಚ್ಚರಿಯಲ್ಲಿ. ಪ್ರಕೃತಿರಹಸ್ಯಗಳನ್ನು ಕಂಡು ದಿಗ್ಭ್ರಾಂತನಾಗದವನಿಗೆ ತತ್ತ್ವಚಿಂತನೆ ಎಲ್ಲಿಂದ ಬರಬೇಕು! **ಇದಮಿತ್ಥಂ** – ಇದು ಹೀಗೆ ಎಂದು ಅನುಭವಕ್ಕೆ ಸಿಕ್ಕುವ ನಮ್ಮ ಅಲ್ಪಾಯುಸ್ಸಿನ ಬದುಕಿನಲ್ಲಿಯೂ ಅನಿರೀಕ್ಷಿತತೆಗಳು ಎದುರಾಗಿ ಅಚ್ಚರಿಯಾಗದೆ ಇರುವುದಿಲ್ಲ. ಲೋಕಾನುಭವ ಒಬ್ಬೊಬ್ಬರಿಗೆ ಒಂದೊಂದು ತರಹ; ಬುದ್ಧನಂಥವರಿಗೆ 'ಜೀವನ ದುಃಖಮಯ; ಆಸೆಯೇ ದುಃಖಕ್ಕೆ ಮೂಲ' ಎಂದಾದರೆ, ಶ್ರೀರಾಮಕೃಷ್ಣರಂಥವರಿಗೆ ಈ ಲೋಕವು 'ತಾಯಿಯ ಲೀಲಾ ವಿಲಾಸದ ರಂಗ; ಕಲ್ಪಿಸಿಕೊಳ್ಳಬಹುದಾದ ಲೋಕಗಳಲ್ಲೆಲ್ಲ ಅತ್ಯುತ್ಕೃಷ್ಟವಾದುದು!' ಈ ಮೌಲ್ಯಮಾಪನ, ಅಚ್ಚರಿ, ರಹಸ್ಯಸ್ಫೋಟ –ಇವುಗಳ ಪ್ರಭಾವ ಅತ್ಯಂತ ಬುದ್ಧಿವಂತರಾದವರನ್ನೂ ಬಿಟ್ಟಿಲ್ಲ. ಇವು ನಮಗೆ ಸೂಚಿಸುತ್ತಿರುವುದು ತರ್ಕಕ್ಕಾಗಲಿ ವಿಜ್ಞಾನಕ್ಕಾಗಲಿ ಸಿಕ್ಕದೆ ತಪ್ಪಿಸಿಕೊಳ್ಳುತ್ತಿರುವ ಯಾವುದೋ ಅತೀತದ ಕಡೆಗೆ ಎಂದೆನಿಸುವುದಿಲ್ಲವೆ?

ತಾತ್ತ್ವಿಕ ಚಿಂತನೆ ಎಂದಕೂಡಲೆ ನಮಗೆ ನಾಲ್ಕು ಪ್ರಶ್ನೆಗಳು ಎದುರಾಗುತ್ತವೆ: (೧) 'ನಾನು' ಎನ್ನುವುದು ಇದೆಯೆ? (೨) 'ನನಗಿಂತ' ಪ್ರತ್ಯೇಕವಾದ ಪ್ರಪಂಚವೊಂದು ಇದೆಯೆ? (೩) ಸತ್ತ ಮೇಲೆ 'ನಾನು' ಇಲ್ಲವಾಗುತ್ತೇನೆಯೆ? (೪) ದೇಹಾವಸಾನವಾದ

ಮೇಲೆ 'ನನ್ನ' ಪ್ರಪಂಚವೂ ಇಲ್ಲವಾಗುತ್ತದೆಯೆ?



## ಸಂವೇದನೆ

ಜೀವಕ್ಕಾಗುವ ಸಂವೇದನೆಗಳ ಸಮೂಹವೇ 'ನಾನು' ಎಂದಿಟ್ಟುಕೊಂಡರೆ, ಸಂವೇದನೆಗೂ ಶಾರೀರಕ ಬದಲಾವಣೆಗಳಿಗೂ ಸಂಬಂಧವಿದೆಯೆಂದು ಖಂಡಿತವಾಗಿ ನುಡಿಯುವ ಜೀವವಿಜ್ಞಾನ ಮನೋವಿಜ್ಞಾನಗಳೆರಡೂ ಸೂಚಿಸುವುದು ಈ ಶರೀರ ಇಲ್ಲವಾದ ಮೇಲೆ 'ನಾನು' ಸಹ ಇಲ್ಲವಾಗುತ್ತದೆ ಎಂದೇ. ಇದೇ ರೀತಿ, ಸಂವೇದನೆಗಳನ್ನು ಉಂಟುಮಾಡುವ ಬಾಹ್ಯಪ್ರಪಂಚಕ್ಕೂ ಸಂವೇದನೆಗಳಿಗೂ ಕಾರ್ಯಕಾರಣ ಸಂಬಂಧವಿರುವುದರಿಂದ ದೇಹಾಂತ್ಯವಾದೊಡನೆ 'ನನ್ನ' ಪ್ರಪಂಚವೂ ನಾಶವಾಗುತ್ತದೆ; ಆದ್ದರಿಂದ 'ನನಗಿಂತ' ಬೇರೆಯಾದ ಪ್ರಪಂಚ ಇಲ್ಲ ಎಂದಾಗುತ್ತದೆ.

ಈಗ 'ಸಂವೇದನೆ'ಯ ಬಗ್ಗೆ ಸ್ವಲ್ಪ ವಿಚಾರ ಮಾಡೋಣ. ವೃಕ್ಷವೊಂದನ್ನು ನಾನು ನೋಡುತ್ತಿರುವೆ. ವೃಕ್ಷದ ಬಗೆಗಿನ ನನ್ನ ಗ್ರಹಿಕೆಯೂ ವೃಕ್ಷದ ವೃಕ್ಷತ್ವವೂ ಒಂದೇಯೆ? ಐವರು ಕುರುಡರು ಒಂದು ಆನೆಯನ್ನು 'ಸಂವೇದಿಸಿ'ಕೊಂಡ ಕಥೆಯನ್ನು ಜ್ಞಾಪಿಸಿಕೊಂಡರೆ, ಇದು ನಿಜವಿರಲಾರದೆಂದು ಗೊತ್ತಾಗುವುದು. ವೃಕ್ಷವು ನನ್ನ ಗ್ರಹಿಕೆಗೆ ಸಿಕ್ಕಬೇಕಾದರೆ, ಅದರಿಂದ ಪ್ರತಿಫಲಿಸಲ್ಪಟ್ಟ ಬೆಳಕಿನ ಕೆಲವಂಶಗಳು ನನ್ನ ಕಣ್ಣನ್ನು ಪ್ರವೇಶಿಸಿ ಬಿಂಬವನ್ನುಂಟುಮಾಡಬೇಕು; ಇದರಿಂದ ನನ್ನ ಕೇಂದ್ರ ನರಮಂಡಲದಲ್ಲಿ ಕೆಲವು ಬದಲಾವಣೆಗಳಾಗಬೇಕು. ಈ ಘಟನೆಗಳೆಲ್ಲ ನನಗೆ ಚೆನ್ನಾಗಿ ಗೊತ್ತು ಎಂದಿಟ್ಟುಕೊಂಡರೂ, ಈ ಘಟನೆಗಳೇ ವೃಕ್ಷವಲ್ಲ; ಅವು ನನ್ನ 'ವೃಕ್ಷಗ್ರಹಿಕೆ' ಮಾತ್ರ. ವೃಕ್ಷದ 'ವೃಕ್ಷತ್ವ' ಕ್ಕಿಂತ ಇದು ಹೇಗೆ ತಾನೇ ಭಿನ್ನವಾಗಲು ಸಾಧ್ಯ?

ವೃಕ್ಷದ 'ವೃಕ್ಷತ್ವ'ವೆಂದರೇನು? ಎಲೆಗಳ ಹಸಿರೆ, ಕಾಂಡದ ಕಾಠಿಣ್ಯವೆ, ಬೇರಿನ ಸ್ಥಿರತೆಯೆ, ಎತ್ತರ-ದಪ್ಪಗಳೆ, ಆಕಾರವೆ? ಇವು ಯಾವುದೂ ಅಲ್ಲ. ಹಾಗೆಯೇ ವಸ್ತುಗಳ 'ವಸ್ತುತ್ವ', ನಾನೆಂಬುದರ 'ನನ್ನತನ' ಕೂಡ. ನಾನೆಂದರೇನು? ನನ್ನ ದೇಹದ ರೂಪ ರಸ ಗಂಧಗಳೆ, ಮನಸ್ಸಿನ ಪ್ರವಣತೆ ಮೊದಲಾದ ವೈಶಿಷ್ಟ್ಯಗಳೆ? ಅವು ನನ್ನ ಗುಣಲಕ್ಷಣಗಳೇ ಹೊರತು ಅವೇ 'ನಾನು' ಅಲ್ಲ. ಹೀಗೆ, ಯಾವುದೇ ವಸ್ತುವಿನ (ನನ್ನನ್ನೂ ಸೇರಿಸಿ) ನಿಜವಾದ ಅಸ್ತಿತ್ವವನ್ನು ನಾವು ತಿಳಿಯಲಾರೆವು; ಅವುಗಳ ಗುಣಲಕ್ಷಣಗಳನ್ನು ಮಾತ್ರ ತಿಳಿಯಬಲ್ಲೆವು.

ತಿಳಿದುಕೊಳ್ಳಲಾರದ್ದಕ್ಕೆ ಪ್ರಯತ್ನಪಟ್ಟೇನು ಪ್ರಯೋಜನ? ಬಿಟ್ಟುಬಿಡೋಣ. ತಿಳಿಯಬಹುದಾದ ವೃಕ್ಷದ 'ಗ್ರಹಿಕೆ'ಯೂ ಆ ಕ್ಷಣದ 'ನನ್ನ' ಸಂವೇದನೆ ಅಷ್ಟೆ ಆ ಸಂವೇದನೆಯೇ ಹೊರಗಿನ ಭೌತವೃಕ್ಷ ಮತ್ತು ಒಳಗಿನ ಮಾನಸವೃಕ್ಷ. ಹಾಗೆಯೇ ನಾನೆಂಬ ಈ ಒಳಭಾವನೆ ಮತ್ತು ಪ್ರಪಂಚವೆಂಬ ಹೊರಗಿನ ಗ್ರಹಿಕೆ ಎರಡೂ ಆಗಿರುವುದು ಒಂದೇ ಸಂವೇದನೆಯಿಂದಲೇ.

## ವ್ಯಷ್ಟಿ ಪ್ರಜ್ಞೆ-ಸಮಷ್ಟಿ ಪ್ರಜ್ಞೆ

ಈಗ, ವೃಕ್ಷದ ಮುಂದೆ ನಾನು ನನ್ನ ಗೆಳೆಯರೊಂದಿಗೆ ನಿಂತಿರುವೆ ಎಂದಿಟ್ಟುಕೊಳ್ಳೋಣ. ನಾವೆಲ್ಲರೂ ಗ್ರಹಿಸುತ್ತಿರುವುದು ಅದೇ ವೃಕ್ಷವನ್ನು ಎಂದು ನಾವು ಪರಸ್ಪರ ಸಂವಹನದಿಂದ ಖಚಿತ ಪಡಿಸಿಕೊಳ್ಳಬಹುದಲ್ಲವೆ ಎಂದಾಗ, ಒಂದೇ ವೃಕ್ಷವು ಅನೇಕಾನೇಕ ಪ್ರಜ್ಞೆಗಳಲ್ಲಿ ಸೇರಿಹೋಯಿತು; ಎಲ್ಲರ ಸಾಮಾನ್ಯ ಗ್ರಹಿಕೆಯದು ಎನ್ನಿಸಿಕೊಂಡಿತು. ಪ್ರಜ್ಞೆಗಳಲ್ಲಿ ವ್ಯಕ್ತಿವಿಶಿಷ್ಟ ಅಂಶಗಳಿದ್ದರೂ ಸಮಷ್ಟಿಯ ಅಂಶವೂ ಇದೆ ಎಂದಾಯಿತು. ಇದೇ ರೀತಿಯಲ್ಲಿ ಬದುಕಿನಲ್ಲಿ ಎಲ್ಲರಿಗೂ ಸಮಾನವಾದದ್ದು ಬೇಕಾದಷ್ಟಿರುವುದರಿಂದ, ನಾವೆಲ್ಲ ಸಮಷ್ಟಿಪ್ರಜ್ಞೆಯ ಭಾಗಗಳು ಎಂದೂ ಹೇಳಬಹುದು.

ಹೀಗೆ ದೇಶ-ಕಾಲಗಳಲ್ಲಿ ನಡೆಯುವುದೆಲ್ಲ ಒಂದೇ ಪ್ರಜ್ಞಾಸ್ತರದಲ್ಲಿ ನಡೆಯುವಂತಿದ್ದರೆ ತತ್ತ್ವಚಿಂತನೆ ಸುಲಭವಾಗುತ್ತಿತ್ತೇನೋ. ಹಾಗಿಲ್ಲದೆ ಇರುವುದರಿಂದ, ದೇಶ-ಕಾಲಗಳಲ್ಲಿನ ಚಿಂತಕರ, ವೀಕ್ಷಕರ ಸಂಖ್ಯಾಬಾಹುಳ್ಯದ್ದೇ ಸಮಸ್ಯೆ – ಎಷ್ಟು ಮತಗಳೋ ಅಷ್ಟೂ ಪಥಗಳು. ಈ ಸಮಸ್ಯೆಗೆ ಪರಿಹಾರ ಸೂಚಿಸುವುದು ತುಂಬ ಸುಲಭ – ನಾವು ನೋಡುತ್ತಿರುವ 'ಬಹುತ್ವ'ವು ಕೇವಲ ತೋರಿಕೆಯದು, ನಿಜವಾದದ್ದಲ್ಲ ಎಂದುಬಿಟ್ಟರಾಯಿತು. ವೇದಾಂತದಲ್ಲಿ ರೂಢಿಗತವಾಗಿರುವ ಮುಖ್ಯವಾದ ನಂಬಿಕೆಯೇ ಇದು. ಇದನ್ನು ಪ್ರತೀಕಗಳ ಮೂಲಕ ಸ್ಪಷ್ಟೀಕರಿಸಲೆತ್ನಿಸುವರು. ವಜ್ರದ ಹರಳು ತನ್ನ ಬಹುಸಂಖ್ಯಾತ ಮುಖಗಳಿಂದ ತನ್ನೆದುರಿಗಿನ ಒಂದು ವಸ್ತುವಿನ ಬಹುಸಂಖ್ಯಾತ ಪ್ರತಿಬಿಂಬಗಳನ್ನುಂಟುಮಾಡುವಂತೆ ಎನ್ನುವುದು ಅಂಥದೊಂದು ಪ್ರತೀಕ. ಇಲ್ಲಿ ವಸ್ತು ಬಹುವಾದಂತೆ ಕಾಣಿಸುವುದೇ ಹೊರತು ಬಹುವಾಗಿರುವುದಿಲ್ಲ.

> "ಸತ್ಯದ ಅನ್ವೇಷಣೆಯಲ್ಲಿ ಭೌತವಿಜ್ಞಾನವು ಯಾವುದನ್ನು ಅನುಸರಿಸುತ್ತಿದೆಯೋ ಅದನ್ನು ಹೊರತು ಮಾನವಾನುಭವದ ಇತರ ಎಲ್ಲ ಅಂಶಗಳನ್ನೂ ಉಪೇಕ್ಷಿಸಬೇಕು ಎಂದು ಹೇಳುವವರ ಗುಂಪಿಗೆ ನಾನು ಸೇರಿಲ್ಲ. ಮಾನವನ ಅನುಭವದ ವಿಶಾಲವಾದ ಮಹತ್ವವನ್ನು ಒಳಗೊಳ್ಳುವ ತತ್ತ್ವಶಾಸ್ತ್ರ ಮತ್ತು ಭೌತವಿಜ್ಞಾನ ಇವುಗಳ ನಡುವೆ ಯಾವುದೇ ಅಸಾಮರಸ್ಯವೂ ನನಗೆ ಕಾಣುತ್ತಿಲ್ಲ. ಭೌತವಿಜ್ಞಾನವು ಇತ್ತೀಚಿಗೆ ಬೆಳೆಯುತ್ತಿರುವ ಚಿಂತನವಿಧಾನ ಅಷ್ಟೆ; ಅದು ಎಷ್ಟು ಗಟ್ಟಿಯಾದದ್ದು ಎಂಬುದು ಇನ್ನೂ ಪರೀಕ್ಷೆಗೆ ಒಳಪಡಬೇಕಾದದ್ದು."
>
> – ಸರ್ ಆರ್ಥರ್ ಎಡಿಂಗ್‌ಟನ್
>
> (ಪ್ರಖ್ಯಾತ ಗಣಿತಜ್ಞ ಮತ್ತು ಖಗೋಳಶಾಸ್ತ್ರಜ್ಞ)

### ಪ್ರತೀಕ – ಅನುಭವ

ಪ್ರತೀಕ ಪ್ರತೀಕವೇ, ಅನುಭವವಲ್ಲ ಎನ್ನುವಿರಾದರೆ, ಸ್ವಲ್ಪ ಯೋಚಿಸಿ. ಹಿಮಾಲಯದ ಕಣಿವೆಯೊಂದರಲ್ಲಿನ ಹಾದಿಯ ಪಕ್ಕದಲ್ಲಿ ನೀವು ಕುಳಿತಿರುವಿರಿ ಎಂದಿಟ್ಟುಕೊಳ್ಳಿ. ಸುತ್ತಮುತ್ತಣ ಹುಲ್ಲುಹಾಸಿನ ಇಳಿಜಾರುಗಳು; ನಡುನಡುವೆ ಭೂಮಿಯನ್ನು ಭೇದಿಸಿಕೊಂಡು ಮೇಲೆದ್ದು ನಿಂತಿರುವ ಕಲ್ಲುಬಂಡೆಗಳು; ಕಣಿವೆಯಾಚೆ ದೂರದಲ್ಲಿ ಸಂಜೆಸೂರ್ಯನ ಕೊಟ್ಟಕೊನೆಯ ಗುಲಾಬಿಕಿರಣಗಳು; ಮುತ್ತಿಡುತ್ತಿರುವ ಮಂಜುಮುಸುಕಿದ ಭೌಮಶಿಖರಗಳು; ಕಣಿವೆಯ ಇಕ್ಕೆಲಗಳಲ್ಲೂ ಧುತ್ತೆಂದು ಮೇಲೆದ್ದು ನಿಂತ ಗಗನಚುಂಬಿ ದೇವದಾರು ವೃಕ್ಷಗಳು. ಎಲ್ಲವೂ ನಿಷ್ಪಂದ, ನೀರವ; ಹೊಸದಾಗಿ ತೊಳೆದು ಹರಡಿದಂತಿರುವ ತಿಳಿನೀಲ ಪಾರದರ್ಶಕ ಆಕಾಶದ ಹಿನ್ನೆಲೆಯಲ್ಲಿ! ನೀವು ನೋಡುತ್ತಿರುವುದೆಲ್ಲವೂ – ಸಣ್ಣಪುಟ್ಟ ಬದಲಾವಣೆಗಳ ಹೊರತಾಗಿ – ಸಾವಿರಾರು ವರ್ಷಗಳ ಹಿಂದಿನಿಂದಲೂ ಅಲ್ಲಿತ್ತು; ಮುಂದೆ ಸಾವಿರಾರು ವರ್ಷಗಳ ನಂತರವೂ ಹಾಗೆಯೇ ಇರುತ್ತದೆ. ಆದರೆ ಕೆಲವೇ ವರ್ಷಗಳ ಹಿಂದೆ ನೀವಿರಲಿಲ್ಲ; ಇನ್ನು ಕೆಲವೇ ವರ್ಷಗಳಲ್ಲಿ ಇಲ್ಲವಾಗುತ್ತೀರಿ!

### ಜೀವನ – ಅಸ್ತಿತ್ವ

ಹೀಗೇ ಯೋಚಿಸುತ್ತಿದ್ದರೆ ನಿಮಗೆ ಇದ್ದಕ್ಕಿದ್ದಂತೆ ವೇದಾಂತ ಸತ್ಯ ಹೊಳೆದುಬಿಡಬಹುದು: ನಿಮ್ಮದು ಎಂದುಕೊಳ್ಳುವ ಜ್ಞಾನ, ಭಾವ, ಆಯ್ಕೆಯ ವೈಶಿಷ್ಟ್ಯಗಳು ದಿಢೀರನೆ ಶೂನ್ಯದಿಂದ ಉದ್ಭವಿಸಿದುವೇನೂ ಅಲ್ಲವಲ್ಲ? ಇವೆಲ್ಲವೂ ಎಲ್ಲ ಚೇತನಗಳಲ್ಲಿಯೂ ನಿರಂತರವಾಗಿ ಇರುವ ಅನಾದಿ–ಅನಂತಗಳು – ಜ್ಞಾನವೂ ಅಷ್ಟೆ, ಭಾವವೂ ಅಷ್ಟೆ. ನೀವೆಂದುಕೊಳ್ಳುವ ನೀವು ಅದರ ಒಂದು ಭಾಗವೆ, ಒಂದು ಚೂರೆ? ಹಾಗಿದ್ದರೆ ಯಾವ ಭಾಗ, ಯಾವ ಚೂರು? ವಸ್ತುನಿಷ್ಠವಾಗಿ ಇತರರಿಗಿಂತ ನಿಮ್ಮಲ್ಲಿ ಭಿನ್ನವಾಗಿರುವುದು, ನಿಮ್ಮದೇ ವೈಶಿಷ್ಟ್ಯ ಎನ್ನಿಸಿಕೊಳ್ಳುವಂಥದು, ಯಾವುದು? ಯಾವುದೂ ಅಲ್ಲ. ಪ್ರಜ್ಞಾವಂತ ಚೇತನಗಳೆಲ್ಲವೂ ಒಂದೇ; ನೀವು ಬದುಕುತ್ತಿರುವ ನಿಮ್ಮ ಜೀವನ ಇಡಿಯ ಅಸ್ತಿತ್ವದ ಒಂದು ಚೂರಲ್ಲ; ಒಂದರ್ಥದಲ್ಲಿ ಅದು ಇಡಿಯ ಅಸ್ತಿತ್ವವೇ ಆಗಿದೆ. ಆದರೆ ಅದು ದೇಶದ ಒಂದು ಬಿಂದುವಿನಲ್ಲಿ, ಕಾಲದ ಒಂದು ಕ್ಷಣದಲ್ಲಿ, ಗ್ರಹಿಕೆಗೆ ಸಿಕ್ಕುವುದಿಲ್ಲ, ಅಷ್ಟೆ. 'ತತ್ ತ್ವಮ್ ಅಸಿ', 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಮಹಾವಾಕ್ಯಗಳ ಅರ್ಥವೂ ಇದೇ.

ಹಾಗಾದರೆ, ನಾವು ಈ ಪ್ರಪಂಚದಲ್ಲಿ ಎರೆಹುಳು ಮಣ್ಣಿನಲ್ಲಿ ಹಾಸುಹೊಕ್ಕಾಗಿರುವಂತೆ ಇದ್ದೇವೆಯೆ? ಮಣ್ಣಿನಲ್ಲಿ ಎರೆಹುಳು ಅಂತರ್ಗತವಾಗಿರುತ್ತದೆ; ಮಣ್ಣಿನಿಂದಲೇ ಅದು ಹುಟ್ಟುತ್ತದೆ, ಮಣ್ಣಿನಲ್ಲಿಯೇ ಲೀನವಾಗುತ್ತದೆ – ಈ ಕ್ರಿಯೆ ನಿರಂತರ. ಯಾವ ಎರೆಹುಳು ಎಲ್ಲಿ, ಏಕೆ, ಹೇಗೆ ಹುಟ್ಟಿತು; ಎಲ್ಲಿ, ಏಕೆ, ಹೇಗೆ ಮಣ್ಣಿನಲ್ಲಿ ಲೀನವಾಯಿತು ಎಂಬುದನ್ನು ಹೇಳಲಾದೀತೆ? ನಿರಂತರತೆ ತಾನೇ ತಾನಾಗಿರುವಾಗ, ಯಾವುದೋ ಒಂದು ಘಟನೆಗೆ ಏನು ಬೆಲೆ ತಾನೇ ಇದ್ದೀತು? ಇರುವುದೆಲ್ಲ ವರ್ತಮಾನದ ಈ ಒಂದು ಕ್ಷಣ ಮಾತ್ರ – ಅದೇ ಅನಾದಿ, ಅದೇ ಅನಂತ. ವಿಶ್ವದ ಸಮಸ್ತ ಆಗುಹೋಗುಗಳ ಹಿಂದಿರುವುದೂ ಇದೊಂದೇ ಸತ್ಯ. ಇದನ್ನರಿತವನು ಕ್ಷಣಭಂಗುರವಾದ ತನ್ನ ಈ ಬದುಕನ್ನೇ ದೊಡ್ಡದೆಂದುಕೊಳ್ಳಲಾರ.

ಯಾವ ಜೀವಿಯೂ ಪ್ರಭಾವಗಳಿಂದ ಹೊರತಾದವನಲ್ಲ. ಆನುವಂಶೀಯವಾಗಿ ಯಾವುದೇ ಬಗೆಯ ಪ್ರಚ್ಛನ್ನ ವ್ಯಕ್ತಿತ್ವ ಸಂಕೇತರೂಪದಲ್ಲಿ ಸಾಗಿ ಬಂದಿದ್ದರೂ ಅದು ನಮ್ಮದೇ ವ್ಯಕ್ತಿತ್ವವಾಗಿ ಮೈದಳೆದು ಹೇಗೆ ಅರಳುತ್ತದೆ ಎನ್ನುವುದು ಚಿಕ್ಕಂದಿನಲ್ಲಿ ನಾವು ಎಂತಹ ಪರಿಸರದಲ್ಲಿ ಬೆಳೆದೆವು ಎನ್ನುವುದರ ಮೇಲೆ ಅವಲಂಬಿತವಾಗುತ್ತದೆ. ನಾವು ಪಡೆದ ನರಮಂಡಲದಷ್ಟೇ ನಾವು ಪಡೆದ ಶಿಕ್ಷಣ, ಅನುಸರಿಸಿದ ಸಂಪ್ರದಾಯಗಳು, ಕೇಳಿ–ಓದಿ–ನೋಡಿ ತಿಳಿದ ಸಂಗತಿಗಳು ಮುಂತಾದುವು ಮುಖ್ಯವಾಗುತ್ತವೆ. ಹಿಂದಿನ ತಲೆಮಾರಿನ ಮುಖ್ಯಕಾಂಡದ ಮುಂದುವರಿಕೆಯೇ ಆದರೂ, ವ್ಯಕ್ತಿತ್ವದ ಸ್ತಂಭಗಳಾಗಿ ನಿಲ್ಲುವ ಆಲದಮರದ ಬಿಳಿಲು ಬೇರುಗಳು ಬೇರೆಯೇ ಆಗಿರುತ್ತವೆ.

### ಆತ್ಮಾನುಭೂತಿ – ಬ್ರಹ್ಮಾನುಭೂತಿ

ಜೀವಾತ್ಮನ ಹುಟ್ಟು ಎಂದರೆ ದೀರ್ಘ ತನಿನಿದ್ರೆಯಿಂದ ಏಳುವಿಕೆಯಂಥದೇ ಹೊರತು ಹೊಸದಾಗಿ ಏನೋ ಒಂದು ಆವಿರ್ಭವಿಸುವುದಲ್ಲ; ಹಾಗೆಯೇ ಸಾವೆಂದರೆ ಜೀವಾತ್ಮನ ನಾಶವಲ್ಲ; ಬದಲಿಗೆ ದೀರ್ಘನಿದ್ರೆಯನ್ನೈದುವುದು ಎನ್ನಬಹುದು. ಇದು ಚಿರನಿದ್ರೆಯೋ ದೀರ್ಘನಿದ್ರೆಯೋ ಹೇಳಬಲ್ಲವರಿಲ್ಲ; ಜೀವಾತ್ಮನ ದೇಹತ್ಯಾಗವಂತೂ ಹೌದೆನ್ನಬಹುದು. ಏಕೆಂದರೆ, ನಮ್ಮ ಆಶೋತ್ತರಗಳು, ಅವನ್ನು ಸಾಧಿಸಲೆತ್ನಿಸುವ ಪ್ರಯತ್ನಗಳು – ಎಲ್ಲವೂ ನಮ್ಮ ಹಿಂದೆ ಬದುಕಿದವರವೇ; ಮುಂದೆ ಹುಟ್ಟಲಿರುವವರವೂ, ಪರಿಸರ ಬೇರೆಯಾಗಿರಬಹುದಾದರೂ ಅವೇ ಆಗಿರಬಹುದು ಎಂದು ಧಾರಾಳವಾಗಿ ಹೇಳಬಹುದು. ಎಂದರೆ ಜೀವಾತ್ಮರುಗಳ ಪ್ರಜ್ಞೆ ಎನ್ನುವುದು ಒಂದೇ; ಅದಕ್ಕೆ ಕಾಲ ದೇಶಗಳ ಪರಿಮಿತಿಯಿಲ್ಲ; ದೇಹಗಳು ಬದಲಾದರೂ ಆ ಪ್ರಜ್ಞೆ ಬದಲಾಗುವುದಿಲ್ಲ. ಜೀವಾತ್ಮರ ಈ ಸಮಷ್ಟಿಪ್ರಜ್ಞೆಯದು ಏಕಮುಖ ಪ್ರವಾಹ – ಕತ್ತಲೆಯಿಂದ ಬೆಳಕಿನೆಡೆಗೆ, ಅಜ್ಞಾನದಿಂದ

ಜ್ಞಾನಾಂಜನದೆಡೆಗೆ, ಇಂದ್ರಿಯಾನುಭವದ ವೈವಿಧ್ಯತೆಯಿಂದ ಆತ್ಮಾನುಭವದ ಅದ್ವೈತದೆಡೆಗೆ.

ಏಕಾಣುಜೀವಿಯಾದ ಅಮೀಬಾದಿಂದ ಮಾನವನವರೆಗೂ ಯಾವುದೊಂದು ಜೀವಿಗೂ ಆತ್ಮಪ್ರಜ್ಞೆ ಇರುವಂತೆ ಕಾಣದು; ಆದರೆ ಮಾನವನಿಗೆ ಮಾತ್ರ ಅದು ಇರುವುದು ಸುಳ್ಳಲ್ಲ. ಸ್ವತಂತ್ರ ವಾಗಿ ಜೀವಕ್ರಿಯೆ ನಡೆಸಬಲ್ಲ ಜೀವಕೋಶಗಳಿಗೆ ಆತ್ಮಪ್ರಜ್ಞೆ ಇಲ್ಲ; ಆದರೆ ಅಂತಹ ಕೋಶಗಳ ಸಮುದಾಯವಾದ ನಮಗೆ ಇದೆ. ಮಾನವರದ್ದೇ ಸಂಘಟನೆಯಾದ ಸಮಾಜಕ್ಕೆ, ದೇಶಕ್ಕೆ – ಏಕೆ, ಇಡಿಯ ಮಾನವಜನಾಂಗಕ್ಕೆ – 'ನಾವೆಲ್ಲ ಒಂದು' ಎಂಬ ಆತ್ಮಪ್ರಜ್ಞೆಯ ಐಕ್ಯವಿದೆಯೆ? ಇದ್ದರೂ ಅಪರೂಪಕ್ಕೊಮ್ಮೆ ತಲೆದೋರಿ ಮರೆಯಾಗುತ್ತದೆ. ಮಾನವಶರೀರಿಗೆ ಮಾತ್ರವೇ ಈ ಆತ್ಮಪ್ರಜ್ಞೆ ಏಕಿರಬೇಕು?

ಅನುಭೂತಿಯ ಎದುರು ಇಂತಹ ಪ್ರಶ್ನೆಗಳೆಲ್ಲ ಅರ್ಥಹೀನವಾಗಿಬಿಡುತ್ತವೆ. ಆತ್ಮಾನುಭೂತಿಯನ್ನು ಸಮಷ್ಟಿ ಮಟ್ಟಕ್ಕೊಯ್ದು ಬ್ರಹ್ಮಾನುಭೂತಿಯನ್ನಾಗಿಸಿಕೊಳ್ಳುವ ಅತ್ಯಂತ ಸುಲಭ ವಿಧಾನ ಎಂದರೆ 'ತನ್ನಂತೆಯೇ ಪರರು' ಎಂದು ಪರಿಭಾವಿಸುವುದು. ನನ್ನಂತೆಯೇ ಕೋಟ್ಯಂತರ 'ಶರೀರಿ'ಗಳಿದ್ದಾರೆ; ನನ್ನ ಪರಿಸರವೇ ಅವರದ್ದೂ ಆಗಿದೆ; ನನ್ನ ಅನುಭವಕ್ಕೆ ಬರುವಂತಹ ಘಟನೆಗಳನ್ನೇ ಅವರೂ ಅನುಭವಿಸುತ್ತಾರೆ ಎಂದಮೇಲೆ ನನ್ನಿಂದ ಅವರು ಭಿನ್ನರು ಹೇಗಾದಾರು? ಹೀಗೆ ಪರಿಭಾವಿಸಿದಾಗ ನಾನೇ ಇನ್ನಿತರ ರೂಪಗಳಲ್ಲಿ ಅವರಾಗಿರುವೆನೆಂದೆನಿಸುತ್ತದೆ. ಈ ನಾನು–ಅವರು, ಶರೀರ–ಶರೀರಿ, ವಸ್ತು–ಚೈತನ್ಯ ಎನ್ನುವುದೆಲ್ಲ ಭಾಷೆಯ ಗೋಡೆಗಳು; ನೈಜಗೋಡೆಗಳಲ್ಲ. ಒಂದೊಂದು ಜೀವ ಕೋಶದಲ್ಲಿರುವ ಚೈತನ್ಯವೂ ನಿಜವಾಗಿ ಬ್ರಹ್ಮವೇ, ಒಂದೊಂದು ಪರಮಾಣುವಿನಲ್ಲಿ ಅಡಗಿರುವ ಚೈತನ್ಯವೂ ಬ್ರಹ್ಮವೇ, 'ಬಿಗ್ ಬ್ಯಾಂಗ್' ಆಗಿರುವುದೆನ್ನಲಾದ ಬ್ರಹ್ಮಾಂಡಗಳ ಮೂಲದಲ್ಲಿದ್ದ ಮಹಾಚೈತನ್ಯವೂ ಬ್ರಹ್ಮವೇ.

## 'ತರ್ಕ'ಕ್ಕೆ ತಿಲಾಂಜಲಿಯಿತ್ತ ವಿಜ್ಞಾನ

ಈಗ ಸ್ವಲ್ಪ ವಿಜ್ಞಾನದತ್ತ ಇಣಿಕಿ ನೋಡೋಣ. ಕಳೆದ ಶತಮಾನದ ಪ್ರಾರಂಭದವರೆಗೂ ವಿಜ್ಞಾನದಲ್ಲಿ ತರ್ಕಬದ್ಧವಾಗಿಲ್ಲದೆ ಇದ್ದ ಯಾವೊಂದು ಊಹೆಗೂ ಮನ್ನಣೆ ಇರಲಿಲ್ಲ. ಚಕ್ರಬಂಧ ಸ್ಪರ್ಧೆಯಲ್ಲಿ ಚೂರುಗಳನ್ನೆಲ್ಲ ಒಂದುಗೂಡಿಸಿ ಅವನ್ನು ಅರ್ಥವತ್ತಾದ ಒಂದು ಆಕಾರಕ್ಕೆ ತರುವಂತೆ, ಲಭ್ಯವಿರುವ ಪ್ರಾಯೋಗಿಕ ಸಂಗತಿ ಗಳನ್ನೆಲ್ಲ ಹೊಂದಿಸಿ ಒಂದು ತಾರ್ಕಿಕ ಸಿದ್ಧಾಂತವನ್ನು ರೂಪಿಸಲು ವಿಜ್ಞಾನ ಹೆಣಗುತ್ತಿತ್ತು. ಎಲ್ಲಿಂದ ಆರಂಭಿಸಿ ಎಲ್ಲಿಗೆ ಹೋಗಿ ಮುಟ್ಟಿದರೂ ಸರಿಯೆ, ಹಂತಗಳೆಲ್ಲ ತರ್ಕಬದ್ಧವಾಗಿದ್ದರಾಯಿತು – ಸಿದ್ಧಾಂತ ರೂಪುಗೊಂಡಂತೆಯೇ.

ವಿಶ್ವದಲ್ಲಿರುವ 'ವಸ್ತು'ವೆಲ್ಲವೂ ಪ್ರೋಟಾನ್ ನ್ಯೂಟ್ರಾನ್ ಎಲೆಕ್ಟ್ರಾನ್‌ಗಳಿಂದಲೇ ಆಗಿವೆ ಎಂದು ನಂಬುವಂತಾದಾಗ, ಚಕ್ರಬಂಧ ಸ್ಪರ್ಧೆಯನ್ನು ಗೆದ್ದೇಬಿಟ್ಟೆವು ಎಂದು ಬೀಗಿದ್ದರು ವಿಜ್ಞಾನಿಗಳು. ವಿಶ್ವದ ಆಗುಹೋಗುಗಳನ್ನೆಲ್ಲ ಅರಿತುಕೊಳ್ಳುವುದಕ್ಕೆ **ಗುರುತ್ವ, ಕಾಂತತ್ವ, ಸ್ಥಾಯೀ ವಿದ್ಯುತ್ತು** ಎಂಬ ಮೂರನ್ನು ಕುರಿತ ನಿಯಮಗಳು ಸಾಕೇ ಸಾಕು ಎನ್ನುವಂತಾಗಿತ್ತು. ಯಾವ ಕಣಗಳು ಯಾವಾಗ ಎಲ್ಲಿ ಎಷ್ಟು ವೇಗದಲ್ಲಿ ಚಲಿಸುತ್ತಿವೆ ಎಂದು ಅರಿತಿದ್ದೇ ಆದರೆ ಎಲ್ಲವೂ ಸುಸಂಬದ್ಧ; ಅಲ್ಲಿ ಪ್ರಕೃತಿಯ ಸ್ವೇಚ್ಛಾಚಾರಕ್ಕೆ ಅವಕಾಶವೇ ಇಲ್ಲ; ರಾಶಿ (mass), ವಿದ್ಯುದಂಶ (charge), ಕಾಂತಧ್ರುವ (magnetic pole) ಇವುಗಳ ನಿರ್ಭಾವುಕ ಸಮೀಕರಣಗಳ ಮೂಲಕ ಎಲ್ಲವೂ ಪೂರ್ವನಿರ್ಧಾರಿತವಾಗಿಯೇ ನಡೆಯುತ್ತದೆ ಎಂದ ಮೇಲೆ ಪರಮಾತ್ಮನಿಗೋ ಪರಬ್ರಹ್ಮಕ್ಕೋ ಕೆಲಸವಾದರೂ ಏನು, ಅದರ ಅಸ್ತಿತ್ವದ ಆವಶ್ಯಕತೆಯಾದರೂ ಎಲ್ಲಿ? ಅಂತಿಮ ಹಂತದ ಇಂತಹ 'ಕ್ಷೇತ್ರ ಸಮೀಕರಣ'ಗಳ ಬಗ್ಗೆ ಕೆಲವರಿಗೆ ಸಂದೇಹ ಉಂಟಾದರೂ, ಅವುಗಳ ಹಿಂದಿದ್ದ ಗಣಿತೀಯ ತರ್ಕಬದ್ಧತೆಗೆ ಹೆದರಿ ಯಾರೂ ಅವನ್ನು ಪ್ರಶ್ನಿಸ ಲಿಲ್ಲ; 'ರಾಶಿ'ಯಂತಹ ಮೂಲಭೂತ ಸಂಗತಿಯ ವೈಜ್ಞಾನಿಕ ನಿರೂಪಣೆಗೂ ಸಹ 'ಪದಾರ್ಥವೊಂದರಲ್ಲಿ ಅಡಗಿರುವ ವಸ್ತುವಿನ ಪರಿಮಾಣಕ್ಕೆ ರಾಶಿಯೆಂದು ಹೆಸರು' ಎನ್ನುವುದಕ್ಕಿಂತ ಹೆಚ್ಚಿನ ವಿವರಣೆ ಬೇಕು ಎನ್ನಿಸಲಿಲ್ಲ.

> **ಅಂತರಂಗದ ಪ್ರಜ್ಞೆಯ ಜಗತ್ತು ಕೂಡ ವೈಜ್ಞಾನಿಕ ಪರಿಶೀಲನೆಗೆ ಒಳಪಡಬೇಕಾದ ಒಂದು ದತ್ತಾಂಶ. ಅಂತಹ ಪರಿಶೀಲನೆ ಭೌತ ವಿಜ್ಞಾನವನ್ನು ಅಸ್ತಿತ್ವದ ಆಧ್ಯಾತ್ಮಿಕ ಆಯಾಮಕ್ಕೆ ಒಯ್ಯುತ್ತದೆ. ಅಲ್ಲದೆ, ಅದನ್ನು ವೇದಾಂತ ಮತ್ತಿತರ ತತ್ತ್ವಚಿಂತನೆಗಳು ರೂಪಿಸಿರುವ ಅಧ್ಯಾತ್ಮಶಾಸ್ತ್ರದ ಹತ್ತಿರ ತರುತ್ತದೆ... ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭೌತವಿಜ್ಞಾನ ಮತ್ತು ಅಧ್ಯಾತ್ಮ ವಿಜ್ಞಾನಗಳ ನಡುವೆ ಬೆಳೆಯುತ್ತಿರುವ ಆರೋಗ್ಯಕರವಾದ ಪರಸ್ಪರ ಸಹಕಾರಕ್ಕೆ ಇದು ಸ್ಪಷ್ಟವಾದ ಸೂಚನೆಯಾಗಿದೆ.**
>
> – ಸ್ವಾಮಿ ರಂಗನಾಥಾನಂದ

ವರ್ಷಗಳು ಕಳೆದಂತೆ ವಿಜ್ಞಾನದ ಈ 'ಆದರ್ಶ ತರ್ಕಬದ್ಧತೆ'ಯ ತಳಹದಿಯಲ್ಲಿ ಬಿರುಕು ಕಾಣಿಸಿಕೊಳ್ಳಲಾರಂಭಿಸಿತು. ಮೇಲೆ ಕಾಣಿಸಿದ ರಾಶಿಯ ನಿರೂಪಣೆಯಲ್ಲಿರುವ 'ಪರಿಮಾಣ'ಕ್ಕೆ (amount) ಏನರ್ಥ? ಅದೇನು ವಸ್ತುವಿನ ಗಾತ್ರವೆ, ವಸ್ತುವಿನಲ್ಲಿ ಅಡಗಿರುವ ಮೂಲಭೂತ ಕಣಗಳನ್ನು ಎಣಿಸಿ ಬಂದ ಮೊತ್ತವೆ? ಏನು ಪರಿಮಾಣವೆಂದರೆ?

'ವಿದ್ಯುದಂಶ'ಕ್ಕೆ ನಿರೂಪಣೆ ಕೊಡುವ ಪ್ರಯತ್ನ ಇನ್ನೂ ದಯನೀಯ. 'ತನ್ನ ಹಾಗೆ ಇರುವ ಇನ್ನಿತರ ವಸ್ತುಗಳ ಮೇಲೆ (ಆಕರ್ಷಣ ಅಥವಾ ವಿಕರ್ಷಣ) ಬಲವನ್ನುಂಟುಮಾಡಬಲ್ಲ, ರಾಶಿರಹಿತ ವಸ್ತು' (a thing with no mass that produces force on all other things like itself). ರಾಶಿ ಇಲ್ಲದ ವಸ್ತು ಹೇಗಿರುತ್ತದೆ? ಹೈಸ್ಕೂಲಿಗೆ ಬಂದಿರುವ ಬುದ್ಧಿಶಾಲಿ ಬಾಲಕನೊಬ್ಬನಿಗೆ ಸಂದೇಹ ಉಳಿಯದಂತೆ 'ವಿದ್ಯುದಂಶ'ದ ಕಲ್ಪನೆಯನ್ನು ಅರ್ಥಮಾಡಿಸಿ, ನೋಡೋಣ!

ಐನ್‌ಸ್ಟೈನ್ ಮಹಾಶಯ 'ವಿದ್ಯುತ್ಕಾಂತತ್ವಕ್ಕೂ ಗುರುತ್ವ ಜಡತ್ವ ಸಂಕೀರ್ಣಕ್ಕೂ ಸಂಬಂಧ ಸ್ಥಾಪಿಸಲು ಸಾಧ್ಯವಾದರೆ ವಿಶ್ವರಹಸ್ಯ ತಿಳಿದಂತೆಯೇ!' ಎಂದು ಉದ್ಘೋಷಿಸಿದ. ಆದರೆ ಅವನಿಗಾಗಲಿ, ಇನ್ನು ಯಾರಿಗೇ ಆಗಲಿ ಈವರೆಗೆ ಅದನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ!